

ಎಂ.ಕೆ. ಮಂಜುನಾಥ್

ಕಲೆ: ಗಣೇಶ ಆಚಾರ್ಯ

# ಮೂವರು ಭಿಕ್ಷುಕರು

ಒಂದು ಊರಿನಲ್ಲಿ ರಾಜ, ಭೈರ ಹಾಗೂ ಮಂಜ ಎಂಬ ಮೂರು ಜನ ಭಿಕ್ಷುಕರಿದ್ದರು. ಈ ಮೂರೂ ಜನ ಭಿಕ್ಷುಕರಾಗಿದ್ದರೂ ನಾನು ಹೆಚ್ಚು ತಾನು ಹೆಚ್ಚು ಎಂದುಕೊಳ್ಳುತ್ತ ಗರ್ವದಿಂದ ವರ್ತಿಸುತ್ತಿದ್ದರು ಮತ್ತು ಸದಾ ಕಿತ್ತಾಡಿಕೊಳ್ಳುತ್ತಿದ್ದರು. ಮೂವರೂ ಪ್ರತಿದಿನ ಆ ಊರಿನಲ್ಲಿದ್ದ ಮನೆಗಳಿಗೆ ಹೋಗಿ ಭಿಕ್ಷೆ ಬೇಡಿ ತಂದ ಅಕ್ಕಿ, ದವಸ–ಧಾನ್ಯಗಳಿಂದ ಅಡುಗೆ ಮಾಡಿಕೊಂಡು,